ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ
JOINT SECRETARY TO CHIEF MINISTER

ಕೊಠಡಿ ಸಂಖ್ಯೆ: 235, 2ನೇ ಮಹಡಿ
ವಿಧಾನ ಸೌಧ, ಬೆಂಗಳೂರು – 560 001
CHIEF MINISTER'S SECRETARIAT
VIDHANA SOUDHA, BANGALORE - 560 001

ದಿನಾಂಕ: ........................

ಪತ್ರದ ಸಂಖ್ಯೆ:CM//46788 / MIN(GOK) / 2013

19/08/2013

ಮಾನ್ಯರೇ,

ವಿಷಯ: ಶ್ರೀ ಕಿರಣ ಕಮಲ ಪ್ರಸಾದ್ ಇವರು ಕರ್ನಾಟಕದಲ್ಲಿ ಜೀತ ಪದ್ಧತಿ ನಿರ್ಮೂಲನೆಗೆ ತೆಗೆದುಕೊಂಡ ಹಾಗೂ ತೆಗೆದುಕೊಳ್ಳ ಬೇಕಾಗಿರುವ ಕ್ರಮಗಳ ಕುರಿತು ಸಲ್ಲಿಸಿರುವ ಅಂಶಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ವಹಿಸುವ ಬಗ್ಗೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 17/08/2013 ರಂದು, ಸದರಿಯವರು ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಿರುವ ಪತ್ರವನ್ನು ಇದರೊಂದಿಗೆ ಲಗತ್ತಿಸಿದೆ.
ಪತ್ರ ಸಲ್ಲಿಸಿದ ಸನ್ಮಾನ್ಯರು : ಡಾ|| ಹೆಚ್.ಸಿ.ಮಹದೇವಪ್ಪ, ಮಾನ್ಯ ಲೋಕೋಪಯೋಗಿ ಸಚಿವರು, ಸದರಿ ವಿಷಯದ ಬಗ್ಗೆ ಪರಿಶೀಲಿಸಿ, ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ

(ಡಾ.ಸಿಂಧೆ ಭೀಮಸೇನ್ ರಾವ್ .ಹೆಚ್)
ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
ಕರ್ನಾಟಕ ಸರ್ಕಾರ

29212/2013

27/8/13

1072
27.08.13

23/8

DIR (SEP)

22/8

(7)

ಡಾ॥ ಹೆಚ್.ಸಿ. ಮಹದೇವಪ್ಪ
ಲೋಕೋಪಯೋಗಿ ಸಚಿವರು
ಹಾಗೂ ಹಾಸನ ಮತ್ತು ಕೊಡಗು
ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ: 330-ಎ, 3ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560 001
ದೂರವಾಣಿ: 080-22258489 / 22033405

CM/46788/MIN(GOK)/13
17/08/13

ಸಂ.ಲೋಸ:ಕ/ 1886/ 2013-14 ದಿನಾಂಕ: 7.8.13

## ನಡವಳಿ

ಶ್ರೀ ಕಿರಣ ಕಮಲ ಪ್ರಸಾದ್, ಸಂಚಾಲಕರು, ಜೀತ ವಿಮುಕ್ತಿ ಕರ್ನಾಟಕ (ಜೀವಿಕ) ಬೆಂಗಳೂರು ಇವರು ಕರ್ನಾಟಕದಲ್ಲಿ ಜೀತಪದ್ಧತಿ ನಿರ್ಮೂಲನೆಗೆ ತೆಗೆದುಕೊಂಡ ಹಾಗೂ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಕುರಿತು ಸುಮಾರು 15 ಅಂಶಗಳ ಪತ್ರವನ್ನು ನನಗೆ ಸಲ್ಲಿಸಿದ್ದು ಈ ಎಲ್ಲ ಅಂಶಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಸಂಬಂಧಿಸಿದವರಿಗೆ ಸೂಚಿಸಬೇಕಾಗಿ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೋರಲಾಗಿದೆ.

ಗೌರವಗಳೊಂದಿಗೆ,

(ಡಾ॥ ಹೆಚ್.ಸಿ.ಮಹದೇವಪ್ಪ)

657
12/08/13

ಶ್ರೀ ಸಿದ್ದರಾಮಯ್ಯ ರವರು,
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,
ಬೆಂಗಳೂರು.

12/8/13

(6)

ಮಾನ್ಯರು: ಹೆಚ್.ಸಿ. ಮಹದೇವಪ್ಪ
ಲೋಕೋಪಯೋಗಿ ಸಚಿವರು
ಕರ್ನಾಟಕ ಸರ್ಕಾರ
ಬೆಂಗಳೂರು

ಜೀವಿಕ

1289, ಐಸೆಕ್ ರಸ್ತೆ,
ನಾಗರಭಾವಿ ಅಂಚೆ,
ಬೆಂಗಳೂರು-560 072
ದೂರವಾಣಿ & ಫ್ಯಾಕ್ಸ್ : 080-23210194
E-mail: jeevika90@gmail.com
www.jeevika-free.org

29-07-2013

M / CM.

ಕರ್ನಾಟಕ ಸರ್ಕಾರವು ಜೀತ ಪದ್ಧತಿ ನಿರ್ಮೂಲನೆಗೆ ಇಷ್ಟರ ವರೆಗೆ ತೆಗೆದುಕೊಂಡಿರುವ ಕ್ರಮಗಳ ವಿವರ
ಮತ್ತು ಮುಂದೆ ಅಗತ್ಯವಾಗಿ ತೆಗೆದುಕೊಳ್ಳಬೇಕಾಗಿರುವ ಕೆಲವು ಕ್ರಮಗಳ ಬಗ್ಗೆ
ಕರ್ನಾಟಕ ಸರ್ಕಾರಕ್ಕೆ – ಪ್ರತ್ಯೇಕವಾಗಿ ಲೋಕೋಪಯೋಗಿ ಸಚಿವರು,
ಮುಖ್ಯಮಂತ್ರಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಕಂದಾಯ ಇಲಾಖೆಗಳ
ಸಚಿವರುಗಳಿಗೆ
ಜೀವಿಕದ ನಿರೂಪಣೆಗಳು

ಜೀತ ಪದ್ಧತಿ ನಿರ್ಮೂಲನೆಯಲ್ಲಿ ಕರ್ನಾಟಕವು ಈಗಾಗಲೇ ಹಲವಾರು ಮಹತ್ತರ ಕ್ರಮಗಳನ್ನು ಕೈಗೊಂಡಿದೆ. ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ:

1. 1997ರ ತನಕ ಕರ್ನಾಟಕ ಸರ್ಕಾರವು ಇಡೀ ಧೇಶದಲ್ಲೇ ಅತಿದೊಡ್ಡ ಪ್ರಮಾಣದಲ್ಲಿ – ಅಂದರೆ ದೇಶದ ಸುಮಾರು ಕಾಲು ಭಾಗದಷ್ಟು – ಜೀತದಾಳುಗಳನ್ನು ಬಿಡುಗಡೆ ಮಾಡಿ - ಪುನರ್ವಸತಿಗೊಳಿಸಿತ್ತು. ಈಗಲೂ ಕೂಡಾ ಅದರ ಒಟ್ಟಾರೆ ಸಾಧನೆ ಮೆಚ್ಚುವಂತಹದ್ದೇ.
2. 2004ರಲ್ಲಿ ಜೀತ ಪದ್ಧತಿ ಕುರಿತ ಕ್ರಿಯಾಯೋಜನೆ ರೂಪಿಸಲು ಕ್ರಮ ಕೈಗೊಂಡು ಅದನ್ನು 2007ರಲ್ಲಿ ಮಂಜೂರು ಮಾಡಿ ಅಂತಹ ಕ್ರಿಯಾ ಯೋಜನೆಯನ್ನು ರೂಪಿಸಿದ ಒಂದೇ ಒಂದು ರಾಜ್ಯ ಕರ್ನಾಟಕವೆನಿಸಿದೆ. ಆ ಕ್ರಿಯಾ ಯೋಜನೆಯ 10,000 ಪ್ರತಿಗಳನ್ನು ಕನ್ನಡದಲ್ಲಿ, 1,000 ಪ್ರತಿಗಳನ್ನು ಇಂಗ್ಲಿಷಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಪ್ರಕಟಿಸಿ ಎಲ್ಲಾ ಅಧಿಕಾರಿಗಳು ಮತ್ತು ಸಮಾಜ ಕಾರ್ಯಕರ್ತರಿಗೆ ಹಂಚಿ ಉತ್ತಮ ಕೆಲಸ ಮಾಡಿದೆ. ಜೀವಿಕವು ಇದನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಕರ್ನಾಟಕ ಸರ್ಕಾರದ ಜೀತ ಕುರಿತ ಕ್ರಿಯಾಯೋಜನೆಯ ಒಂದು ಪ್ರತಿಯನ್ನು ಲಗತ್ತಿಸಲಾಗಿದೆ.
3. 2011ರಲ್ಲಿ ರಾಜ್ಯ ಮಟ್ಟದಲ್ಲಿ ಉಪನಿರ್ದೇಶಕ ಮಟ್ಟದ ಒಬ್ಬ ಪ್ರತ್ಯೇಕ ಅಧಿಕಾರಿಯನ್ನು ಜೀತ ಕಾರ್ಯಕ್ರಮಗಳ ನಿರ್ವಹಣೆಗೆ ನೇಮಿಸಿದೆ.
4. 2012ರಲ್ಲಿ ರಾಜ್ಯಾದ್ಯಂತ ಜೀತ ಸಮೀಕ್ಷೆಗೆ ಆದೇಶಿಸಿದ್ದು ದೇಶದಲ್ಲೇ ಇದೊಂದು ರಾಜ್ಯದ ದಿಟ್ಟ ಹೆಜ್ಜೆಯಾಗಿದೆ.

5. ಜೀತ ಸಮೀಕ್ಷೆಗೆ ಪೂರಕವಾಗಿ ಪ್ರತಿ ಜಿಲ್ಲೆಯ ನಾಲ್ಕು ಉನ್ನತ ಮಟ್ಟದ ಅಧಿಕಾರಿಗಳು – ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿಗಳು ಮಾತು ಉಪಕಾರ್ಯದರ್ಶಿಗಳು – ಇವರುಗಳನ್ನೊಳಗೊಂಡಂತೆ 2012ರ ಕೊನೆ ಮತ್ತು 2013ರ ಆರಂಭದಲ್ಲಿ ರಾಜ್ಯ ಮಟ್ಟದಲ್ಲಿ ಎರಡು ಜೀತ ಕುರಿತ ಸಂವೇದನಾ ತರಬೇತಿಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಆಯೋಜಿಸಿ ಪರಿಣಾಮಕಾರಿಯಾಗಿ ನಡೆಸಿಕೊಂಡು ಹೋಗಿದೆ. ಜೀವಿಕದ ಕೆಲವು ಕಾರ್ಯಕರ್ತರೇ ಅವುಗಳಲ್ಲಿ ಪ್ರಮುಖ ಸಂಪನ್ಮೂಲ ವ್ಯಕ್ತಿಗಳಾಗಿದ್ದರು.
6. ಜೊತೆಗೆ 2013ರ ಜನವರಿ 11ರಂದು ರಾಜ್ಯದ 30 ಜಿಲ್ಲಾ ಮಟ್ಟದ ಮತ್ತು ಪ್ರತಿ 52 ಉಪವಿಭಾಗ ಮಟ್ಟದ ಜೀತಜಾಗೃತಿ ಸಮಿತಿಯ ಪ್ರತಿ 15 ಮಂದಿ ಸದಸ್ಯರಿಗೆ ವಿನೂತನ ರೀತಿಯ ಸೆಟಲೈಟ್ ಆಧಾರಿತ ತರಬೇತಿಗಳನ್ನು ಕೂಡಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ತರಬೇತಿ ಸಂಸ್ಥೆ ಮೂಲಕ ನಡೆಸಿಕೊಂಡು ಹೋಗಿದೆ. ಅದರಲ್ಲಿಯೂ ಜೀವಿಕ ಕಾರ್ಯಕರ್ತರು ಸಂಪನ್ಮೂಲ ವ್ಯಕ್ತಿಗಳಾಗಿದ್ದರು.

ಇವೆಲ್ಲಾ ಬಹಳ ಅತ್ಯುತ್ತಮ ಕಾರ್ಯಕ್ರಮಗಳು. ಅವನ್ನು ಇನ್ನೂ ಪರಿಣಾಮಕಾರಿಯಾಗಿ ಮುಂದುವರಿಸಿಕೊಂಡು ಹೋಗಬೇಕಾಗಿದೆ. ಇದರ ಜೊತೆಗೆ ಇನ್ನಿತರ ಕಾರ್ಯಕ್ರಮಗಳನ್ನೂ ಹಾಕಿಕೊಳ್ಳಬೇಕಾಗಿದೆ. ಅಂತಹ ಕೆಲವು ಸಲಹೆಗಳನ್ನು ಜೀವಿಕವು ಸಿದ್ಧಪಡಿಸಿದೆ. ಸರ್ವೋಚ್ಚ ನ್ಯಾಯಾಲಯವು 15 ಅಕ್ಟೋಬರ್ 2012ರಂದು ರಿಟ್ ಪಿಟಿಷನ್ (ಸಿವಿಲ್) 3922/1985ರಲ್ಲಿ ನೀಡಿದ ತೀರ್ಪಿನಲ್ಲಿಯ ನಿರ್ದೇಶನಗಳನ್ನು ಎಲ್ಲಾ ರಾಜ್ಯ ಸರ್ಕಾರಗಳು ಪಾಲಿಸಬೇಕಾಗುವ ಹಿಉನ್ನೆಲೆಯಲ್ಲಿ ಈ ಸಲಹೆಗಳು ಮಹತ್ವವನ್ನು ಪಡೆಯುತ್ತವೆ. ಆ ತೀರ್ಪಿನ ಒಂದು ಪ್ರತಿಯನ್ನು ಲಗತ್ತಿಸಲಾಗಿದೆ.

ಜೀವಿಕ ಸಲಹೆಗಳು ಈ ಕೆಳಗಿನಂತಿವೆ:

1. ಉನ್ನತ ಅಧಿಕಾರಿಗಳಿಗೆ ಮತ್ತು ಎಲ್ಲಾ ಜಿಲ್ಲಾ ಮತ್ತು ಉಪವಿಭಾಗ ಮಟ್ಟದ ಜಾಗೃತಿ ಸಮಿತಿಗಳ ಸದಸ್ಯರಿಗೆ ಸಟೆಲ್ಲೈಟ್ ಮುಖಾಂತರ ನಡೆಸುವ ಜೀತ ಪದ್ಧತಿ ಬಗ್ಗೆ ಸಂವೇದನಾ ತರಬೇತಿಗಳ ಮೂಲ ಉದ್ದೇಶವು ಈಡೇರಬೇಕಾದರೆ ಅವನ್ನು ಕೇವಲ ಒಂದೇ ಸಾರಿ ಮಾಡಿ ನಿಲ್ಲಿಸಿದರೆ ಸಾರ್ಥಕವಾಗಲಾರದು. ಈ ತರಬೇತಿಗಳನ್ನು ಪ್ರತಿ ವರ್ಷವೂ ಅ.ನ.ಸಾ.ರಾ.ಗ್ರಾ.ಅ. ಸಂಸ್ಥೆಯು ನಡೆಸಿಕೊಂಡು ಹೋಗುವಂತಾಗಬೇಕು.

2. ಇಂತಹ ತರಬೇತಿಗಳನ್ನು ಈ ಮುಂದಿನ ಅಧಿಕಾರಿಗಳಿಗೂ ಪ್ರತಿ ವರ್ಷ ನಡೆಸಿಕೊಂಡು ಹೋಗಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಅವರ್ಯಾರೆಂದರೆ: ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಹೆಚ್ಚುವರಿ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು; ಎಲ್ಲಾ ತಾಲೂಕಿನ ತಹಶೀಲ್ದಾರರು ಮತ್ತು ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು; ಪ್ರತಿ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಮತ್ತು ಯೋಜನಾಅಭಿವೃದ್ಧಿ ಅಧಿಕಾರಿಗಳು; ಪ್ರತಿ ತಾಲೂಕಿನ ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಿಗರು; ಎಲ್ಲಾ ತಾಲೂಕು ಮತ್ತು ಎಲ್ಲಾ ತಾಲೂಕು ಪಂಚಾಯತುಗಳ ಕಛೇರಿಯಲ್ಲಿಯ ಜೀತ ಕುರಿತ ಕೇಸ್ ವರ್ಕರ್‌ಗಳು.

3. ಪ್ರತಿ ಜಿಲ್ಲೆಯಲ್ಲಿ ಹೊಸದಾಗಿ ಕೈಗೊಳ್ಳಲಾಗುವ ಜೀತ ಸಮೀಕ್ಷೆಯನ್ನು ಪರಿಣಾಮಕಾರಿಯಾಗಿ ನಡೆಯುವಂತೆ ನೋಡಿಕೊಳ್ಳುವುದು. ಇನ್ನೂ ಹಲವಾರು ಜಿಲ್ಲೆಗಳಲ್ಲಿ ರಾಜ್ಯ ಮಟ್ಟದ ತರಬೇತಿಗಳು ನಡೆದ ಮೇಲೂ ಇನ್ನೂ ಸಮೀಕ್ಷೆ ಕಾರ್ಯವನ್ನು ಕೈಗೊಂಡಿಲ್ಲ. ಅದಕ್ಕಾಗಿ ಸಮೀಕ್ಷೆ ಕೈಗೊಳ್ಳುವ ಮುಂಚೆ ಸಮೀಕ್ಷೆ ಕೈಗೊಳ್ಳುವ ಅಧಿಕಾರಿಗಳಿಗೆ ಜೀತ ಕಾನೂನು ಮತ್ತು ಜೀತದಾಳುಗಳನ್ನು ಗುರುತಿಸುವುದರ ಕುರಿತು ಜೀತ ಕ್ರಿಯಾ ಯೋಜನೆಯಲ್ಲಿರುವ ಮಾರ್ಗದರ್ಶನಗಳ ಕುರಿತು ಪರಿಣತರಿಂದ ಸಂವೇದನಾ ತರಬೇತಿಗಳನ್ನು ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ಆಯೋಜಿಸುವಂತೆ ಆಗಬೇಕು ಹಾಗೂ 2012 ಮೇ ತಿಂಗಳಲ್ಲಿ ಸರ್ಕಾರವು ಆದೇಶಿಸಿದ ಸಮೀಕ್ಷೆ ಕಾರ್ಯವನ್ನು ಶೀಘ್ರಗತಿಯಲ್ಲಿ ಮುಕ್ತಾಯಗೊಳಿಸುವಂತೆ ಆಗಬೇಕು.

4. 2007ರ ನಂತರದ ಬೆಳವಣಿಗೆಗಳನ್ನು ಗಮನಿಸಿ ಜೀತ ಪದ್ಧತಿ ಕುರಿತ ಕ್ರಿಯಾಯೋಜನೆಯಲ್ಲಿ ಸೂಕ್ತ ಬದಲಾವಣೆ ತಂದು ಪರಿಷ್ಕೃತ ಆವೃತ್ತಿಯನ್ನು ರೂಪಿಸಿ ಮುದ್ರಿಸಿ ಹಂಚುವುದು. ಸೆಕ್ಷನ್ 21ರ ಪ್ರಕಾರ ನ್ಯಾಯಿಕ ದಂಡಾಧಿಕಾರಿಗಳ ಅಧಿಕಾರಗಳನ್ನು ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳಿಗೆ ನೀಡಿರುವುದರಿಂದ ಜೀತದಾಳುಗಳಿಗೆ ಬಿಡುಗಡೆ ಪತ್ರ ನೀಡಿದ ಕೂಡಲೇ ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ಸೆಕ್ಷನ್ 21ರ ಅಡಿಯಲ್ಲಿ ವಿಚಾರಣೆ ನಡೆಸಿ ಅಪರಾಧಿಗಳಿಗೆ ಶಿಕ್ಷೆ ನೀಡುವಂತೆ ವಿಚಾರಣೆ ನಡೆಸುವಂತೆ 2008ರ ಕ್ರಿಯಾ ಯೋಜನೆಯಲ್ಲಿ ಸೂಕ್ತ ಬದಲಾವಣೆಗಳನ್ನು ತರಬೇಕಿದೆ. ಇನ್ನಿತರ ಕೆಲವು ಬದಲಾವಣೆಗಳನ್ನೂ ಅಳವಡಿಸಬೇಕಾಗಿದೆ. 2008ರ ಕ್ರಿಯಾ ಯೋಜನೆ ಮತ್ತು ಪರಿಷ್ಕೃತ ಕ್ರಿಯಾಯೋಜನೆಗಳನ್ನು ಇಲಾಖೆಯ ವೆಬ್ ಸೈಟ್‌ನಲ್ಲಿ ಪ್ರಚುರ ಪಡಿಸುವಂತೆ ಆಗಬೇಕು. ಇದರ ಜೊತೆಗೆ ಅ.ನ.ಸಾ.ರಾ.ಗ್ರಾ.ಅ. ಸಂಸ್ಥೆಯು ರಾಜ್ಯ ಮಟ್ಟದ ತರಬೇತಿಗಳಿಗೆ ಸಿದ್ಧ ಪಡಿಸಿದ ಸಂಪನ್ಮೂಲ ಪುಸ್ತಕಗಳನ್ನೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ವೆಬ್ ಸೈಟ್‌ನಲ್ಲಿ ಪ್ರಚುರ ಪಡಿಸಬೇಕು.

5. ರಾಜ್ಯ ಮಟ್ಟದ ಉನ್ನತಾಧಿಕಾರದ ಸಮಿತಿಯಲ್ಲಿ ಬಿಡುಗಡೆಗೊಳಿಸಿದ ಜೀತದಾಳುಗಳ ಕೆಲ ಪ್ರತಿನಿಧಿಗಳನ್ನು ನೇಮಿಸುವುದು. ಯಾವುದೇ ಸಮಸ್ಯೆ ಪರಿಹಾರಕ್ಕೆ ಅದರ ನೇರ ಅನುಭವವಿರುವವರ ಅಭಿಪ್ರಾಯಗಳನ್ನು ಪಡೆದುಕೊಂಡರೆ ಸಮಸ್ಯೆಯ ನಿಜವಾದ ರೂಪವನ್ನು ಅರಿಯಲು ಮತ್ತು ಅದರ ಕುರಿತು ಸೂಕ್ತ ಕ್ರಮ ಕೈಗೊಳ್ಳಲು ನೆರವಾಗುವುದು. ಆ ದೃಷ್ಟಿಯಲ್ಲಿ 1997ರಿಂದ ಕರ್ನಾಟಕದಲ್ಲಿ "ಕರ್ನಾಟಕ ಜೀತದಾಳುಗಳ ಮತ್ತು ಭೂರಹಿತ ಕೃಷಿಕಾರ್ಮಿಕರ ಒಕ್ಕೂಟ"ವೆಂಬ ಕಾರ್ಮಿಕರ ಒಕ್ಕೂಟವು ನೋಂದಾಯಿಸಲ್ಪಟ್ಟಿದೆ ಮತ್ತು ಜೀತ ನಿರ್ಮೂಲನೆ ಕುರಿತು ಅದು ಸಕ್ರಿಯ ಕೆಲಸ ಮಾಡುತ್ತಿದೆ. ಆದರ ರಾಜ್ಯ ಮಟ್ಟದ ಪದಾಧಿಕಾರಿಗಳನ್ನು ರಾಜ್ಯ ಮಟ್ಟದ ಉನ್ನತಾಧಿಕಾರದ ಸಮಿತಿಗೆ ನೇಮಿಸುವಂತಾಗಬೇಕು.

**5.1 ಈ ಸಮಿತಿಯು ಪ್ರತಿ 6 ತಿಂಗಳಿಗೊಮ್ಮೆ ಕಡ್ಡಾಯವಾಗಿ ಸೇರುವಂತೆ ಆಗಬೇಕು.**

6. ಬಿಡುಗಡೆಗೊಳಿಸಿದ ಜೀತದಾಳುಗಳಿಗೆ ರೂ. 300/–ಗಳ ಮಾಸಿಕ ಪಿಂಚಣಿಯನ್ನು **ಜೀತದಾಳುಗಳನ್ನು ಬಿಡುಗಡೆಗೊಳಿಸಿದ 15 ದಿನದೊಳಗೆ ಅವರಿಗೆ ಸಿಗುವಂತಾಗಬೇಕು.**

**6.1 ಈ ಪಿಂಚಣಿಯನ್ನು 300 ರೂ.ಗಳಿಂದ 2000 ರೂ.ಗಳಿಗೆ ಏರಿಸಬೇಕು.**

7. ಜೀತದಾಳುಗಳ ಪುನರ್ವಸತಿಗೆ ರೂ. 20,000/-ಗಳು ಈಗಿನ ಪರಿಸ್ಥಿತಿಯಲ್ಲಿ ತೀರಾ ಅತ್ಯಲ್ಪವಾದ್ದರಿಂದ ಅದನ್ನು ಎರಡು ಲಕ್ಷ ರೂಪಾಯಿಗಳಿಗೆ ಏರಿಸಬೇಕು ಮತ್ತು ಆ ಕುರಿತು ಸಲಹೆಯನ್ನು ಕೇಂದ್ರ ಸರ್ಕಾರಕ್ಕೆ ನೀವು ನೀಡಬೇಕು. ಜೊತೆಗೆ ಪ್ರತಿ ವಿಮುಕ್ತ ಜೀತದಾಳುಗಳಿಗೆ ಈ ಕೆಳಗಿನ ಸೌಲಭ್ಯಗಳು ಸಿಗುವಂತಾಗಬೇಕು:

7.1 ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಪರಿಹಾರ ಧನದ ಜೊತೆಗೆ ಕರ್ನಾಟಕ ಕ್ರಿಯಾ ಯೋಜನೆಯಲ್ಲಿಯಂತೆ ಸಬ್ಸಿಡಿ ಸಾಲಸೌಲಭ್ಯಗಳನ್ನೂ ವಿಮುಕ್ತ ಜೀತದಾಳುಗಳಿಗೆ ನೀಡಬೇಕು.

7.2 ವಿಮುಕ್ತ ಜೀತದಾಳುಗಳಿಗೆ ನಿವೇಶನ ನೀಡಿ ವಸತಿ ಸೌಲಭ್ಯ ಒದಗಿಸುವುದು.

7.3 ಅವರಿಗೆ ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಯನ್ನು ಕಡ್ಡಾಯವಾಗಿ ನೀಡಬೇಕು.

7.4 ವಿಮುಕ್ತ ಜೀತದಾಳುಗಳ ಮಕ್ಕಳಿಗೆ ಉಚಿತ ವಸತಿ ಶಾಲೆಗಳಲ್ಲಿ ಪ್ರವೇಶ ನೀಡುವುದು.

7.5 ವಿಮುಕ್ತ ಜೀತದಾಳುಗಳ ಮಕ್ಕಳ ಮುಂದುವರಿದ ಶಿಕ್ಷಣಕ್ಕೆ ನೆರವು ನೀಡುವುದು.

7.6 ವಿಮುಕ್ತ ಜೀತದಾಳುಗಳು ಮತ್ತವರ ಕುಟುಂಬಕ್ಕೆ ಉಚಿತ ಆರೋಗ್ಯ ತಪಾಸಣೆ ಮತ್ತು ಆರೋಗ್ಯ ವಿಮೆಗಳನ್ನು ಒದಗಿವುದು.

7.7 ವಿಮುಕ್ತ ಜೀತದಾಳುಗಳಿಗೆ ಸ್ವಸಹಾಯ ಗುಂಪು ರಚನೆ ಮಾಡಲು ಪ್ರೋತ್ಸಾಹ ನೀಡಿ ಆ ಗುಂಪುಗಳಿಗೆ ವಿಶೇಷ ಬಡ್ಡಿ ರಹಿತ ಸಾಲ ಸೌಲಭ್ಯಗಳನ್ನು ಒದಗಿಸುವುದು.

7.8 ವಿಮುಕ್ತ ಜೀತದಾಳುಗಳು ದಲಿತರು ಅಥವಾ ಮೂಲನಿವಾಸಿಗಳಾಗಿದ್ದಲ್ಲಿ ಅವರಿಗೆ ಕಡ್ಡಾಯವಾಗಿ ಎರಡು ಎಕ್ರೆ ಭೂಮಿಯನ್ನು ನೀಡುವುದು.

8. ಜೀತದಾಳುಗಳ ಪುನರ್ವಸತಿಯನ್ನು ಅವರನ್ನು ಬಿಡುಗೊಳಿಸಿದ 15 ದಿನದೊಳಗೆ ರೂಪಿಸಿ ಮಂಜೂರು ಮಾಡುವಂತಾಗಬೇಕು. ಇದಕ್ಕೋಸ್ಕರ 18-08-2004ರಲ್ಲಿ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹೊರಡಿಸಿದ ಸುತ್ತೋಲೆಯನ್ನು ಸರ್ಕಾರದ ಆದೇಶದ ರೂಪದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಹೊರಡಿಸುವಂತಾಗಬೇಕು. ಆ ಸುತ್ತೋಲೆಯಲ್ಲಿ ಈ ರೀತಿ ಸೂಚಿಸಲಾಗಿದೆ: "ನೀವು [ಜಿಲ್ಲಾಧಿಕಾರಿಗಳು] ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯೊಂದಿಗೆ ಕೂಡಿ, ನಿಮ್ಮ ಜಿಲ್ಲೆಯಲ್ಲಿ ಹಾಲಿ ಅನುಷ್ಠಾನಗೊಳಿಸಲಾಗುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಬಡತನ ನಿರ್ಮೂಲನಾ ಯೋಜನೆಗಳ ಅಡಿಯಲ್ಲಿ ಆದ್ಯತೆ ಮೇರೆ ಜೀತ ವಿಮುಕ್ತರುಗಳ ಪುನರ್ವಸತಿ ಕಾರ್ಯವನ್ನು ಕೈಗೊಳ್ಳುವಂತೆ ಕೋರಿದೆ ಹಾಗೂ ಜೀತವಿಮುಕ್ತರಿಗೆ ನೀಡಬೇಕಾದ ಹಣವನ್ನು ಜಿಲ್ಲೆಯಲ್ಲಿ ಲಭ್ಯವಿರುವ ಅನುದಾನದಿಂದ ತಕ್ಷಣ ಬಿಡುಗಡೆ ಮಾಡಿ, ತದನಂತರ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಕೇಂದ್ರ ಪುರಸ್ಕೃತ ಕಾರ್ಯ ಯೋಜನೆಯಡಿ ಜಿಲ್ಲಾ ಮಟ್ಟದ ಪರಾಮರ್ಷಕ ಸಮಿತಿಯ ಸಭೆ ನಡವಳಿಯೊಂದಿಗೆ ಸಲ್ಲಿಸುವ ಪ್ರಸ್ತಾವನೆಯ ಮೇರೆಗೆ ಸರ್ಕಾರದಿಂದ ಬಿಡುಗಡೆ ಮಾಡಲಾಗುವ ಅನುದಾನದಲ್ಲಿ ಸದರಿ ಹಣವನ್ನು ಹೊಂದಾಣಿಕೆ ಮಾಡಿಕೊಳ್ಳಬಹುದಾಗಿರುತ್ತದೆ."

9. ಜೀತ ಪದ್ಧತಿರದ್ದತಿ ಕಾನೂನಿನ ನಿರ್ವಹಣೆಗೆ ರಾಜ್ಯ ಮಟ್ಟದಲ್ಲಿ ನಿಯೋಜಿಸಲಾದ ಉಪನಿರ್ದೇಶಕರ ಇತರ ಜವಾಬ್ದಾರಿಗಳನ್ನು ಅವರಿಂದ ತೆರವುಗೊಳಿಸಿ ಅವರು ಜೀತ ನಿರ್ಮೂಲನೆಗೆ ಸಂಪೂರ್ಣವಾಗಿ ತೊಡಗಿಸಿ ಕೊಳ್ಳುವಂತೆ ಮಾಡುವುದು.

9.1 ಆ ಅಧಿಕಾರಿಯನ್ನು ಉಪನಿರ್ದೇಶಕ ಮಟ್ಟದಿಂದ ನಿರ್ದೇಶಕ ಮಟ್ಟಕ್ಕೆ ಏರಿಸುವುದು.

9.2 ಜೀತ ನಿರ್ಮೂಲನೆಗೆ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಉಪನಿರ್ದೇಶಕ/ನಿರ್ದೇಶಕರ ನೆರವಿಗೆ ಕನಿಷ್ಟ ಮೂರು ಮಂದಿಯನ್ನೊಳಗೊಂಡ ಒಂದು ಕಾರ್ಯಕೋಶವನ್ನು ಮಂಜೂರು ಮಾಡಬೇಕು.

10. ಜೀತ ಪದ್ಧತಿ ರದ್ದತಿ ಕಾನೂನಿನ ಪ್ರಕಾರ ಎಲ್ಲಾ ಕೆಲಸ ಕಾರ್ಯಗಳನ್ನು ನೆರವೇರಿಸುವ ಜವಾಬ್ದಾರಿ ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳದ್ದು. ಅದೇ ಕಾನೂನು ತಮ್ಮ ಜವಾಬ್ದಾರಿಗಳನ್ನು ಜಿಲ್ಲಾಧಿಕಾರಿಗಳು ತಮ್ಮ ಕೈಕೆಳಗಿನ ಬೇರೊಬ್ಬ ಪ್ರತ್ಯೇಕ ಅಧಿಕಾರಿಗಳಿಗೆ ವಹಿಸಿಕೊಡಬಹುದು ಎಂದು ಹೇಳುತ್ತದೆ. ಜಿಲ್ಲಾಧಿಕಾರಿಗಳಿಗೆ ಜಿಲ್ಲೆಯಲ್ಲಿ ಹಲವಾರು ಜವಬ್ದಾರಿಗಳಿರುವುದರಿಂದ ಜೀತ ಬಗ್ಗೆ ಸಂಪೂರ್ಣ ಗಮನಹರಿಸಲು ಕಷ್ಟಕರ. ಆದ್ದರಿಂದ ಎಲ್ಲಾ ಜಿಲ್ಲಾಧಿಕಾರಿಗಳು ಕಡ್ಡಾಯವಾಗಿ ಜೀತ ಕುರಿತು ತಮ್ಮ ಜವಾಬ್ದಾರಿಯನ್ನು ಹೆಚ್ಚುವರಿ ಜಿಲ್ಲಾಧಿಕಾರಿಗಳಿಗೆ ವಹಿಸಿಕೊಡುವಂತೆ ಸರ್ಕಾರವು ಆದೇಶ ಹೊರಡಿಸುವಂತಾಗಬೇಕು.

11. ಜಿಲ್ಲಾಮಟ್ಟ ಮತ್ತು ಉಪವಿಭಾಗ ಮಟ್ಟದ ಜೀತ ಕುರಿತ ಜಾಗೃತಿ ಸಮಿತಿಗಳಲ್ಲಿ ಮೂವರು ದಲಿತ ಮತ್ತು ಮೂಲನಿವಾಸಿ ಮುಖಂಡರು, ಇಬ್ಬರು ಸಮಾಜ ಸೇವಕರು ಮತ್ತು ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟ ಸರ್ಕಾರೇತರ ಅಥವಾ ಸರ್ಕಾರಿ ಮೂವರು ಹೀಗೆ 8 ಮಂದಿ ಸರ್ಕಾರೇತರ ವ್ಯಕ್ತಿಗಳನ್ನು ಜಿಲ್ಲಾಧಿಕಾರಿಗಳು ಅಥವಾ ಉಪವಿಭಾಗಾಧಿಕಾರಿಗಳು ನೇಮಿಸುವ ಅವಕಾಶವಿದೆ. ಮೂವರು ದಲಿತ ಮತ್ತು ಮೂಲನಿವಾಸಿ ಮುಖಂಡರೊಂದಿಗೆ ಸಮಾಜ ಸೇವಕರ ಜಾಗದಲ್ಲಿ ಇಬ್ಬರು ವಿಮುಕ್ತ ಜೀತದಾಳುಗಳನ್ನು ಕಡ್ಡಾಯವಾಗಿ ನೇಮಿಸಲು ಸರ್ಕಾರವು ಆದೇಶ ಹೊರಡಿಸಬೇಕು.

12. 11–11–2002ರಲ್ಲಿ ಸರ್ಕಾರವು ಹೊರಡಿಸಿದ ಸುತ್ತೋಲೆಯಂತೆ ಜೀತ ಕುರಿತ ಜಾಗೃತಿ ಸಮಿತಿಗಳನ್ನು ಪ್ರತಿ ಎರಡು ತಿಂಗಳುಗಳಿಗೊಮ್ಮೆ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ಕಡ್ಡಾಯವಾಗಿ ನಡೆಸುವಂತೆ ಆಗಬೇಕು.

13. ಅಧಿಕಾರಿಗಳು ಜೀತದಾಳುಗಳನ್ನು ಗುರುತಿಸುವಾಗ ಅವರು ಜೀತದಾಳುಗಳ ಯಜಮಾನರ ಸುಳ್ಳು ಹೇಳಿಕೆಗಳನ್ನು ಮಾತ್ರ ಪರಿಗಣನೆಗೆ ತೆಗೆದುಕೊಂಡು "ಜೀತದಾಳುಗಳು ದಿನಗೂಲಿ ಮಾಡುತ್ತಿದ್ದಾರೆ; ಅವರು ಜೀತದಾಳುಗಳಲ್ಲ" ಎಂದು ವರದಿ ನೀಡಿ ಜೀತದಾಳುಗಳಿಗೆ ಅನ್ಯಾಯ ಮಾಡಿರುವ ಎಷ್ಟೋ ಪ್ರಕರಣಗಳು ನಮ್ಮಲ್ಲಿವೆ. 2011ರ ಡಿಸೆಂಬರ್ 18 ಮತ್ತು 19ರಂದು ವಿಕಾಸ ಸೌಧದಲ್ಲಿ ಜೀತ ಕುರಿತು ನಡೆದ ರಾಜ್ಯ ಮಟ್ಟದ ವಿಚಾರ ಸಂಕಿರ್ಣದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸದಸ್ಯರಾಗಿರುವ ನ್ಯಾಯಮೂರ್ತಿ ಬಿ.ಸಿ. ಪಟೇಲರು ಒಂದು ಸ್ಪಷ್ಟತೆ ನೀಡಿದ್ದರು. ಅದೇನೆಂದರೆ, "ಯಾವುದೇ ಯಜಮಾನನು ತನ್ನಲ್ಲಿ ಕೆಲಸ ಮಾಡುವ ವ್ಯಕ್ತಿ ಜೀತದಾಳುವಲ್ಲ, ದಿನಗೂಲಿಯಾಳು ಎಂದು ಹೇಳಿದರೆ, ಕನಿಷ್ಟ ವೇತನ ಕಾಯಿದೆಯಡಿ ಕೆಲಸಕ್ಕಿಟ್ಟುಕೊಂಡಿರುವ ವ್ಯಕ್ತಿಯು ತನ್ನಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳ ಕುರಿತು ನೋಂದಣಿ ಪುಸ್ತಕವನ್ನು ಮತ್ತು ಕೆಲಸದಾಳುಗಳಿಗೆ ಕೊಡುವ ದಿನಗೂಲಿ ಬಗ್ಗೆ ಕೂಲಿ ಚೀಟಿಯನ್ನು ಪ್ರಸ್ತುತ ಪಡಿಸಬೇಕು. ಇವೆರಡನ್ನು ಯಾವುದೇ ಯಜಮಾನನು ಪ್ರಸ್ತುತ ಪಡಿಸದಿದ್ದರೆ ಅವನಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿ

ಅಥವಾ ವ್ಯಕ್ತಿಗಳು ಕಾನೂನಿನ ಪ್ರಕಾರ ಜೀತದಾಳುಗಳಾಗಿದ್ದರೆ ಅವರನ್ನು ಜೀತದಾಳುವೆಂತಲೇ ಪರಿಗಣಿಸಿ ವರದಿ ಮಾಡಬೇಕು." ಈ ವಿಷಯಗಳನ್ನು ಸ್ಪಷ್ಟಪಡಿಸಿ ಜೀತದಾಳುಗಳನ್ನು ಗುರುತಿಸುವ ಪ್ರತಿಯೊಬ್ಬ ಅಧಿಕಾರಿಯು ಅದರಂತೆ ನಡೆದು ಕೊಳ್ಳುವಂತೆ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಆದೇಶ ನೀಡುವಂತೆ ಆಗಬೇಕು.

14. ಎಷ್ಟೋ ಕಡೆ ಜೀತ ಬಗ್ಗೆ ಕೆಲಸ ಮಾಡುವ ಜೀವಿಕದ ಕಾರ್ಯಕರ್ತರ ಮೇಲೆ ಮಾಲಿಕರಿಂದ ಬೆದರಿಕೆಗಳು ದೌರ್ಜನ್ಯಗಳು ನಡೆಯುತ್ತಿದ್ದು ಕೆಲವು ಕಡೆ ಅವರಿಗೆ ಪ್ರಾಣ ಬೆದರಿಕೆಗಳನ್ನೂ ಹಾಕಿದ್ದು ಅವರು ನಿರ್ಭಯದಿಂದ ಜೀತ ವಿಮುಕ್ತಿಗೆ ಕೆಲಸ ಮಾಡಲು ಅಡ್ಡಿಯಾಗುತ್ತದೆ. ಜೀವಿಕ ಕಾರ್ಯಕರ್ತರಿಗೆ ಸೂಕ್ತ ರಕ್ಷಣೆಯ ಸಿಗುವ ವ್ಯವಸ್ಥೆಯೂ ಆಗಬೇಕು.

15. ಜೀತ ಪದ್ಧತಿ ರದ್ಧತಿ ಕಾನೂನಿನಲ್ಲಿ ಕೆಲವು ಸೂಕ್ತ ಬದಲಾವಣೆಗಳನ್ನು ತರುವ ಅವಶ್ಯಕತೆ ಇದೆ. ಅದಕ್ಕೆ ಹೆಚ್ಚಿನ ಸಿದ್ಧತೆ ಮತ್ತು ಬದಲಾವಣೆಗಳನ್ನು ಸಂಸತ್ಸಭೆಯಲ್ಲಿ ಮಂಜೂರು ಮಾಡುವ ಅವಶ್ಯಕತೆ ಇದೆ. ಆದರೆ ಅದೇ ಉದ್ದೇಶದ ಹೆಚ್ಚಿನ ಬದಲಾವಣೆಗಳನ್ನು ಕಾನೂನಿನಡಿಯ ನಿಯಮಗಳಲ್ಲಿ ಬದಲಾವಣೆಗಳನ್ನು ಕೇಂದ್ರ ಕಾಮ್ರಿಕ ಇಲಾಖೆಯು ರಾಜ್ಯಪತ್ರದಲ್ಲಿ ಪ್ರಕಟಿಸುವ ಮೂಲಕ ಅನುಷ್ಠಾನಗೊಳಿಸಬಹುದು. ಜೀವಿಕವು ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ ದೆಹಲಿಯ ಸಹಯೋಗದೊಂದಿಗೆ [ಅಲ್ಲಿ ಪ್ರಾಚಾರ್ಯರಾಗಿರುವ ಪ್ರೊ. ಬಾಬು ಮ್ಯಾಥ್ಯುರಾರ ಮಾರ್ಗದರ್ಶನದಲ್ಲಿ ಮತ್ತು ಕುಲಪತಿಗಳಾದ ಡಾ. ರಣಬೀರ್ ಸಿಂಗ್‌ರವರ ಅನುಮೋದನೆಯೊಂದಿಗೆ] ಅಂತಹ ನಿಯಮಗಳ ಒಂದು ಕರಡನ್ನು ರಚಿಸಿದೆ. ಅವನ್ನು ಕೇಂದ್ರ ಕಾರ್ಮಿಕ ಇಲಾಖೆಯು ಪರಿಗಣಿಸುವಂತೆ ತಾವು ನೆರವು ನೀಡಬೇಕು. ಇಷ್ಟರ ವರೆಗೆ ಸಿದ್ಧ ಪಡಿಸಿದ ನಿಯಮಗಳ ಕರಡು ಪ್ರತಿಯನ್ನು ಲಗತ್ತಿಸಲಾಗಿದೆ.

16. ಈ ಎಲ್ಲಾ ಕ್ರಮಗಳನ್ನು ಸೂಕ್ತ ರೀತಿಯಲ್ಲಿ ಕಾರ್ಯಗತಗೊಳಿಸಲು ಕರ್ನಾಟಕ ಸರ್ಕಾರವು ವರ್ಷಕ್ಕೆ ನಿಗದಿ ಮಾಡಲಿರುವ ಬಜೆಟ್‌ನಲ್ಲಿ ಅಗತ್ಯ ನಿಧಿಯನ್ನು ಅಗತ್ಯವಾಗಿ ಕಾಯ್ದಿರಿಸಬೇಕಾಗಿದೆ.

ಕರ್ನಾಟಕ ರಾಜ್ಯಾದ್ಯಂತ ಜೀತ ಪದ್ಧತಿಯನ್ನು ಪರಿಣಾಮಕಾರಿಯಾಗಿ ನಿರ್ಮೂಲನೆಗೊಳಿಸಲು ಜೀವಿಕದ ಈ ಎಲ್ಲಾ ಸಲಹೆಗಳನ್ನು ಕರ್ನಾಟಕ ಸರ್ಕಾರ, ಪ್ರತ್ಯೇಕವಾಗಿ ಮುಖ್ಯಮಂತ್ರಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಕಂದಾಯ ಇಲಾಖೆಗಳ ಸಚಿವರು ಅಂಗೀಕರಿಸಿ ಅವುಗಳ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಾರೆಂದು ಜೀವಿಕವು ದೃಢವಾದ ನಂಬಿಕೆಯನ್ನು ಇಟ್ಟುಕೊಂಡಿದೆ.

ಕಿರಣ ಕಮಲ ಪ್ರಸಾದ

(ಕಿರಣ ಕಮಲ ಪ್ರಸಾದ)

ಸಂಚಾಲಕರು – ಜೀವಿಕ.

19 ಜೂನ್ 2013

ಹನುಮಂತ - ಬೀದರ್, ಬಿಜಾಪುರ, ಬಾಗಲಕೋಟೆ

ಶರಣಪ್ಪ ಸ್ವಾಮಿ - ಗುಲ್ಬರ್ಗ, ರಾಯಚೂರು, ಕೊಪ್ಪಳ

ರಾಮಸ್ವಾಮಿ ಎ. - ಬಳ್ಳಾರಿ, ಉತ್ತರಕನ್ನಡ (ಶಿರಸಿ)

ಬಸವರಾಜ ಪಾಟೀಲ್ - ಬೆಳಗಾಂ, ಗದಗ, ಧಾರವಾಡ

ಗೋಪಾಲ ಎ - ದಾವಣಗೆರೆ, ಚಿತ್ರದುರ್ಗ, ತುಮಕೂರು, ಚಿಕ್ಕಮಗಳೂರು

ಗಂಗಾಧರಸ್ವಾಮಿ - ಶಿವಮೊಗ್ಗ, ದಕ್ಷಿಣಕನ್ನಡ, ಹಾಸನ

ಉಮೇಶ್ - ಕೊಡಗು, ಚಾಮರಾಜನಗರ, ಮೈಸೂರು

ಬಸವರಾಜ - ಮಂಡ್ಯ, ರಾಮನಗರ

ನಾರಾಯಣಸ್ವಾಮಿ - ಬೆಂಗಳೂರುನಗರ, ಬೆಂಗಳೂರು(ಗ್ರಾ), ಕೋಲಾರ